**ಓ.ಎಸ್.ನಂ. 697/2019**

**ಡಿ.ಡಬ್ಲ್ಯು:2**

ದಿನಾಂಕಃ 05-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಬಿ ಆರ್ ವಾದಿ ಪರ ವಕೀಲರಿಂದಃ-**

ನಾನು ಬಂಡಿಕೊಪ್ಪಲಿನಲ್ಲಿ ವಾಸವಿರುತ್ತೇನೆ. 1 ನೇ ಪ್ರತಿವಾದಿಯು ನನ್ನ ಸಂಬಂಧಿಕರು. ಈ ಕೇಸಿನ ಮತ್ತೊಬ್ಬ ಸಾಕ್ಷಿದಾರರಾದ ನಂಜುಂಡಪ್ಪ ನನ್ನ ಸ್ನೇಹಿತನಾಗಬೇಕು. ಸದರಿ ಸಾಕ್ಷಿಯು 1 ನೇ ಪ್ರತಿವಾದಿಯು ಸ್ನೇಹಿತರಾಗಿರುತ್ತಾರೆ. ನಾನು ಸುಮಾರು 20 ವರ್ಷದಿಂದ ನ್ಯಾಯಾಲಯಕ್ಕೆ ಬರುತ್ತಿರುತ್ತೇನೆ. ವಾದಿಯ ತಂದೆ ರಾಜಪ್ಪ ಈ ದಾವೆಯನ್ನು ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇತ್ತು. 2018 ರಲ್ಲಿ ರಾಜಪ್ಪ ಮತ್ತು 1 ನೇ ಪ್ರತಿವಾದಿಯು ಜಗಳ ಮಾಡಿಕೊಂಡು ಪಿರ್ಯಾದನ್ನು ನೀಡಿದ್ದ ಬಗ್ಗೆ ನನಗೆ ಮಾಹಿತಿ ಇರುತ್ತದೆ. 2018 ರಲ್ಲಿ ರಾಜಪ್ಪ ಮತ್ತು 1 ನೇ ಪ್ರತಿವಾದಿ ಜಗಳ ಮಾಡಿಕೊಂಡ ನಂತರ ಈ ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿ. ರಾಜಪ್ಪ ನವರು ಮತ್ತು 1 ನೇ ಪ್ರತಿವಾದಿಯು ಜಗಳ ಮಾಡಿಕೊಂಡ ನಂತರ ರಾಜಪ್ಪನವರು ಬೇರೆಯಾಗಿ ವಾಸವಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಾಂದಿಗೆ ಜಗಳ ಮಾಡಿಕೊಂಡ ನಂತರ ರಾಜಪ್ಪ ರವರು ಅವರ ಹೆಣ್ಣು ಮಕ್ಕಳೊಂದಿಗೆ ವಾಸವಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲು ಹೆಣ್ಣುಮಕ್ಕಳೊಂದಿಗೆ ವಾಸವಿದ್ದರು ಈ ದಾವೆಯನ್ನು ಸಲ್ಲಿಸಿದ ನಂತರ 1 ನೇ ಪ್ರತಿವಾದಿ ಕಲ್ಲೇಶಪ್ಪ ರವರು ಕರೆದುಕೊಂಡು ಬಂದು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ನನ್ನ ತಂಗಿಯನ್ನು ವಿವಾಹ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ರಾಜಪ್ಪ ನವರು ಯಾವಾಗ ತೀರಿಕೊಂಡಿರುತ್ತಾರೆಂದು ದಿನಾಂಕ ಗೊತ್ತಿಲ್ಲ. ಈಗ್ಗೆ ಸುಮಾರು 1 ½ ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ರಾಜಪ್ಪ ತೀರಿಕೊಂಡಾಗ ಅವರ ಹೆಣ್ಣು ಮಕ್ಕಳು ಮತ್ತು 1 ನೆ ಪ್ರತಿವಾದಿಯ ನಡುವೆ ಜಗಳವಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. 2018 ರಲ್ಲಿ ರಾಜಪ್ಪ ನವರೊಂದಿಗೆ 1 ನೇ ಪ್ರತಿವಾದಿ ಜಗಳ ಮಾಡಿದ ನಂತರ 1 ನೇ ಪ್ರತಿವಾದಿ ರಾಜಪ್ಪನವರಿಗೆ ಹಲ್ಲೆ ಮಾಡಿದ್ದರಿಂದ 2018 ರಿಂದ ಅವರು ಮರಣಹೊಂದಿರುವವರಗೊ 1 ನೇ ಪ್ರತಿವಾದಿಯಾಂದಿಗೆ ವಾಸವಿರಲಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ಹಲ್ಲೆ ಮಾಡಿದ್ದರಿಂದ ರಾಜಪ್ಪನವರು ಅವರ ಕೊಟ್ಟಿಗೆಯಲ್ಲೇ 3 ದಿನಗಳ ಕಾಲ ಊಟವಿಲ್ಲದೇ ನರಳಿಕೊಂಡು ವಾಸವಿದ್ದು ಆ ನಂತರ ಅವರ ಹೆಣ್ಣು ಮಕ್ಕಳು ಕಾರನ್ನು ಮಾಡಿಕೊಂಡು ಬಂದು ರಾಜಪ್ಪನವರನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಹಣದ ಬಡ್ಡಿ ವ್ಯವಹಾರವನ್ನು ಮಾಡುವುದಿಲ್ಲ. ನನಗೆ ಒಟ್ಟು 15 ಎಕರೆ ಆಸ್ತಿ ಇರುತ್ತದೆ. ಸದರಿ ಆಸ್ತಿಗಳಲ್ಲಿ ವಿಭಾಗ ಕೋರಿ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಡಿಕ್ರಿ ಆದಾರದ ಮೇಲೆ FDP ದಾವೆಯು ಮುಂದುವರೆದಿರುತ್ತದೆ ಎಂದರೆ ಸರಿಯಲ್ಲ. ನಾವು ಇಬ್ಬರು ಅಣ್ಣ ತಮ್ಮಂದಿರು ಹಾಗೂ 4 ಜನ ಹೆಣ್ಣು  ಮಕ್ಕಳು. ನಮ್ಮ ತಂದೆಗೆ ಒಟ್ಟು 6 ಜನ ಮಕ್ಕಳು. ಸುರೇಶ ಎಂಬುವವರು ಯಾರ ಮಗ ಎಂದು ನನಗೆ ಗೊತ್ತಿಲ್ಲ. ಸುರೇಶ ನನ್ನ ಮೇಲೆ ದಾವೆಯನ್ನು ಹಾಕಿರುವ ಬಗ್ಗೆ ನನಗೆ ಗೊತ್ತು.  ಸದರಿ ದಾವೆಯು ಡಿಕ್ರಿಯಾಗಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸುರೇಶನ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ಅಣ್ಣನ ಹೆಸರು ಮರುಳಸಿದ್ದಪ್ಪ. ಸದರಿ ದಾವೆಯಲ್ಲಿ ಸುರೇಶ ನನ್ನ ಅಣ್ಣನಾದ ಮರುಳಸಿದ್ದಪ್ಪನ ಮಗನೇ ಅಲ್ಲ ಎಂದು ನನ್ನ ಪರ ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಅಕ್ಕ ತಂಗಿಯರು ಸದರಿ ದಾವೆಯಲ್ಲಿ ಸುರೇಶ ಮತ್ತು ಉಳಿದ ಪಕ್ಷಗಾರರು ಅಣ್ಣ ತಮ್ಮಂದಿರು ಅಕ್ಕತಂಗಿಯರಾಗಿದ್ದು ಎಲ್ಲರೂ ಸಮಾನ ಹಿಸ್ಸೆ ಬರಬೇಕೆಂದು ತಮ್ಮ ಪರ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಾನು ಈ ದಾವೆಯ  ನನ್ನ ಪ್ರಮಾಣಪತ್ರದಲ್ಲಿ ಮೃತ ರಾಜಪ್ಪ ನವರಿಗೂ ಮತ್ತು 1 ನೇ ಪ್ರತಿವಾದಿಗೂ ಸಾಲವನ್ನು ನೀಡಿದ್ದೆ ಎಂದು ತಿಳಿಸಿದ್ದು ಸದರಿ ಹಣವನ್ನು ನಾನು ಮನೆಯಲ್ಲಿ ಇಟ್ಟುಕೊಂಡಿದ್ದೆ. ನಾನು ಇಟ್ಟುಕೊಂಡಿದ್ದ ಹಣವು ಒಟ್ಟು ಕುಟುಂಬದ ಜಮೀನಿನ  ದುಡಿಮೆಯಿಂದ ಬಂದ ಹಣವಾಗಿರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಹಣಕ್ಕೆ ನಮ್ಮ ಕುಟುಂಬದ ಹೆಣ್ಣು ಮತ್ತು ಗಂಡು ಮಕ್ಕಳಿಗೆಲ್ಲಾ ಹಕ್ಕಿತ್ತು ಎಂದರೆ ಸರಿ. 1 ನೇ ಪ್ರತಿವಾದಿಯ ಹೆಂಡತಿಯಾಗದ ಶಶಿಕಲಾ ರವರಿಗೂ ಸಹ ಸದರಿ ಹಣದಲ್ಲಿ ಹಕ್ಕಿರುತ್ತದೆ ಎಂದರೆ ಸರಿಯಲ್ಲ.  ಮೃತ ರಾಜಪ್ಪನವರು ಮತ್ತು 1 ನೇ ಪ್ರತಿವಾದಿಯು ನನ್ನ ಬಳಿ ಯಾವ ದಿನಾಂಕದಂದು ಬಂದು  ಸಾಲ ಕೇಳಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ನೆಂಟರುಗಳಿಗೆ ಮಾತ್ರ ಸಾಲವನ್ನು ಕೊಡುತ್ತೇನೆ. ನಾನು ರಾಜಪ್ಪರವರಿಗೆ ನೀಡಿದ ಸಾಲದ ಬಗ್ಗೆ ದಾಖಲೆಯನ್ನು ಬರೆಸಿಕೊಂಡಿರುತ್ತೇನೆ.

ರಾಜಪ್ಪನವರು ಮತ್ತು 1 ನೇ ಪ್ರತಿವಾದಿಯ ನಡುವೆ ಜಗಳವಿದ್ದರಿಂದ ಮುಂದಕ್ಕೆ ಭದ್ರತೆಗಾಗಿ ನಾನು ನೀಡಿದ ಹಣಕ್ಕೆ  ದಾಖಲೆಯನ್ನು ಬರೆಸಿಕೊಂಡಿರುತ್ತೇನೆ. ನನ್ನ ಬಳಿ ಹಣವನ್ನು ನಮ್ಮ ಮನೆಗೆ ಬಂದು ಕೇಳಿರುತ್ತಾರೆ. ಬೆಳಗ್ಗೆ 1 ಗಂಟೆಗೆ ಬಂದು ಹಣವನ್ನು ಕೇಳಿರುತ್ತಾರೆ. ನಾನು ಎಷ್ಟು ಗಂಟೆಗೆ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆಂದು ನನಗೆ ಗೊತ್ತಿಲ್ಲ. ಹಣವನ್ನು ಕೊಡುವಾಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ಮತ್ತು ನನ್ನ ಬಾಮ್ಮೈದನಾದ 1 ನೇ ಪ್ರತಿವಾದಿ ಮಾತ್ರ ಇದ್ದೆವು ಬೇರೆ ಯಾರು ಇರಲಿಲ್ಲ. ಸದರಿ ದಿನದಂದು 1 ನೇ ಪ್ರತಿವಾದಿಯು ಸಂಜೆಯವರೆಗೂ ನಮ್ಮ ಮನೆಯಲ್ಲೇ ಇದ್ದರು. ರಾಜಪ್ಪ ನವರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದು 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ನನ್ನನ್ನು ಸರಿಯಾಗಿ ನೋಡಿಕೊಳ್ಳದೇ ಊಟವನ್ನು

ಕೊಡುತ್ತಿಲ್ಲ ಎಂದು ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 25-01-2020 ರಲ್ಲಿ ಕಡೂರಿನ ನನ್ನ ಸ್ನೇಹಿತನ ಅಂಗಡಿಯ ಬಳಿ ಪ್ರನೋಟ್ ಅನ್ನು ಬರೆದುಕೊಟ್ಟಿರುತ್ತಾರೆ. ಬೆಳಗ್ಗೆ 12-00 ಗಂಟೆಗೆ ನನ್ನ ಸ್ನೇಹಿತನು ಸದರಿ ಪ್ರನೋಟ್ ಅನ್ನು ಬರೆದುಕೊಟ್ಟಿರುತ್ತಾನೆ. 1 ನೇ ಪ್ರತಿವಾದಿಯು ಸದರಿ ಪ್ರನೋಟನ್ನು ತಂದಿರುತ್ತಾರೆ. ಅದಕ್ಕೆ ಸಂಬಂಧಿಸಿದ ಸ್ಟಾಂಪ್ ಅನ್ನು ಅವರೇ ತಂದಿರುತ್ತಾರೆ. ಅದು ಎಷ್ಟು ಮೊತ್ತದ ಸ್ಟಾಂಪ್ ಎಂದು ನನಗೆ ಗೊತ್ತಿಲ್ಲ. ನಾನು ಇದುವರೆಗೂ ಎಷ್ಟು ಮೊತ್ತದ ಸ್ಟಾಂಪ್ ಎಂದು  ನಾನು ನೋಡೆ ಇರುವುದಿಲ್ಲ. ಸದರಿ ಪ್ರನೋಟಿಗೆ ನಂಜುಂಡಪ್ಪ ಮತ್ತು ಜಗದೀಶ ರವರು ಮಾತ್ರ ಸಹಿ ಮಾಡಿರುತ್ತಾರೆ. ಸದರಿ ಜಗದೀಶ್ ನನ್ನ ಸ್ನೇಹಿತ. ನಂಜುಂಡಪ್ಪ ಎಂದರೆ ಈ ದಿನದಂದು ನನ್ನ ಜೊತೆಗೆ ಸಾಕ್ಷಿ ಹೇಳಲು ಬಂದಿರುವ ವ್ಯಕ್ತಿ ಎಂದರೆ ಸರಿ. 1 ನೇ ಪ್ರತಿವಾದಿಗೆ ಹಣವನ್ನು ಸಾಲವಾಗಿ ನೀಡಿದೆ ಎಂದು ನಾನು ತಿಳಿಸಿದ್ದು ಸದರಿ ವಿಚಾರವನ್ನು ರಾಜಪ್ಪ ನವರ ಹೆಣ್ಣು ಮಕ್ಕಳಾದ ನೇತ್ರಾವತಿ ಮತ್ತು ಸ್ವರ್ಣ ಗೌರಮ್ಮ ರವರಿಗೆ ನಾನು ತಿಳಿಸಿರುವುದಿಲ್ಲ. ಅದೇ ರೀತಿ ನಾನು ನನ್ನ ಸಹೋದರ, ಸಹೋದರಿಯರಿಗೂ ಸದರಿ ವಿಚಾರವನ್ನು ತಿಳಿಸಿರುವುದಿಲ್ಲ. ಪ್ರನೋಟ್ ಅನ್ನು 1 ನೇ ಪ್ರತಿವಾದಿ ಮೊದಲೇ ನನಗೆ ಬರೆದುಕೊಟ್ಟಿದ್ದು ನಂತರ ಹಣವನ್ನು ಪಡೆದಿರುತ್ತಾರೆ. ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿ 2 ಸಹಿಗಳನ್ನು ಮಾಡಿರುತ್ತಾರೆ. ಅದರ ಮೇಲೆ ಯಾವುದೇ ತಿದ್ದುಪಡಿ ಮಾಡಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆ ಯಾವುದೇ ತಿದ್ದುಪಡಿ ಆಗಿರಲಿಲ್ಲ. ನಾನು ಹಾಜರುಪಡಿಸಿದ ದಾಖಲೆಯನ್ನು ಏನು ಬರವಣಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ 1 ನೇ ಪ್ರತಿವಾದಿ ಮತ್ತು ರಾಜಪ್ಪನವರು ಸದರಿ ದಾಖಲೆಯನ್ನು ನನಗೆ ಬರೆದು ಕೊಡಲಾಗಿದೆ ಎಂದು ನಮೂದಿಸಲಾಗಿರುತ್ತದೆ. ನಿಪಿ-12 ರ ಪ್ರನೋಟ್ ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿ.

ತಿದ್ದುಪಡಿ ಮಾಡಿದ ಜಾಗದಲ್ಲಿ ಸಹಿಯನ್ನು ಮಾಡಿರುವುದಿಲ್ಲ. ನಿಪಿ-12 ರ ಪ್ರನೋಟ್ ನಲ್ಲಿ 2 % ಬಡ್ಡಿ ಎಂದು ನಮೂದಿಸಲಾಗಿದೆ. ನಿಪಿ-12 ರ ಪ್ರನೋಟ್ ನ ಮೇಲೆ ನಾನು 1 ನೇ ಪ್ರತಿವಾದಿಗೆ ಹಾಗೂ ರಾಜಪ್ಪನವರಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನೋಟೀಸು ನೀಡಿರುವ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿಯೂ ನಾನು ತಿಳಿಸಿರುವುದಿಲ್ಲ. ನಿಪಿ-12 ರ ಪ್ರನೋಟ್ ನಲ್ಲಿ ಯಾವ ದಿನಾಂಕವನ್ನು ಬರೆಯಲಾಗಿದೆ ಎಂದು ನನಗೆ ಕಾಣಿಸುತ್ತಿಲ್ಲ. 2018 ರಲ್ಲಿ ಜಗಳವಾದ ನಂತರ 1 ನೇ ಪ್ರತಿವಾದಿ ರಾಜಪ್ಪನವರನ್ನು ಊಟ ಹಾಕದೇ ಓಡಿಸಿದ ನಂತರ ರಾಜಪ್ಪ ನವರು ಅವರ ಹೆಣ್ಣು ಮಕ್ಕಳ ಮನೆಯಲ್ಲೇ ವಾಸವಿದ್ದರು ಆದ್ದರಿಂದಾಗಿ ರಾಜಪ್ಪ ನವರು ಸಾಲಪಡೆಯುವ ಪ್ರಮಯವೇ ಇರಲಿಲ್ಲ ಹಾಗೂ ನಿಪಿ-12 ದಾಖಲಾತಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರಾಜಪ್ಪನವರು ಬದುಕಿದ್ದ ಸಮಯದಲ್ಲಿ ರಾಜಪ್ಪನವರಿಗೆ ನಾನು ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಿಪಿ-12 ರ ಪ್ರನೋಟಿನ ಮೇಲೆ ಈ ಹಿಂದೆ ನಾನು ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಹಾಗೂ ದಾವೆಯನ್ನುಸಲ್ಲಿಸಿರುವುದಿಲ್ಲ. ಇಲ್ಲಿಯವರೆಗೂ ನಾನು ನಿಪಿ-12 ರ ಪ್ರನೋಟ್ ನ ಮೇಲೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ರಾಜಪ್ಪನವರು ಹಣವನ್ನು ಸಾಲವಾಗಿ ನನ್ನಿಂದ ಪಡೆಯದೇ ಇದ್ದುದ್ದರಿಂದ ನಾನು ನಿಪಿ-12 ರ ಪ್ರನೋಟಿನ ಮೇಲೆ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯೊಂದಿಗೆ ಶರೀಕಾಗಿ ರಾಜಪ್ಪನವರ ಹೆಣ್ಣುಮಕ್ಕಳಿಗೆ ಆಸ್ತಿಯನ್ನು ಕೊಡಬೇಕೆಂಬ ದುರುದ್ದೇಶದಿಂದ ಸದರಿ ನಿಪಿ-12 ರ ದಾಖಲೆಯನ್ನು ಸೃಷ್ಟಿಸಿ, ಈ ದಾವೆಯಲ್ಲಿ ಸಾಕ್ಯ ನುಡಿಯುತಿದ್ದೇನೆಂದರೆ ಸರಿಯಲ್ಲ. ನಾನು ರಾಜಪ್ಪನವರಿಗೆ ಸಾಲವಾಗಿ ಹಣ ನೀಡಿರುವ ಬಗ್ಗೆ ನಿಪಿ-12 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ಸದರಿ ಸಮಯದಲ್ಲಿ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-12 ರಲ್ಲಿ 1 ರೂಪಾಯಿ ಸ್ಟಾಂಪಿನ ಮೇಲೆ ಯಾರು ಸಹ ಸಹಿ ಮಾಡಿಸಿಕೊಂಡು 2 ಲಕ್ಷ ಹಣವನ್ನು ಸಾಲವಾಗಿ ನೀಡುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಬಾಮೈದನಾದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. 2014 ರಿಂದ ಬಡ್ಡಿ ರಹಿತವಾಗಿ 3 ಲಕ್ಷದ ವರೆಗೆ ಜಮೀನಿನ ಮೇಲೆ ಸಹಕಾರ ಸಂಘಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲವನ್ನು ನೀಡುತ್ತಾರೆ ಎಂದರೆ ಸರಿ. ನನಗೆ ಸರ್ಕಾರದಿಂದ APL ಕಾರ್ಡನ್ನು ವಿತರಿಸಿರುತ್ತಾರೆ ಅದನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(**ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ.ಹೇ.ಕೇ.ಸ.ಇ.ಎ.ಒ.

***Sd/-***
***2 ನೇ.ಹೆ.ಪ್ರ:ದ:ನ್ಯಾ:ದಂ.,ರವರು,***
***ಕಡೂರು.***